ಕೋಪಗೊಂಡ ಮಹಿಳೆ,

'ನಮಗೆ ಪ್ರಾಣಸಂಕಟ. ನಿಮಗೆ ಚೆಲ್ಲಾಟ, ಅಂದಂಗಾಯಿತು ನಿಮ್ಮ ಮಾತು. ಹಾಕಿ ಆಡ್ಸಿ ಎಲ್ಲರೂ ಸೇರಿ ಅವನಿಗೆ ಹೊಡೆದ್ರೆ ನನ್ನ ಹೊಟ್ಟೆ ತಣ್ಣಗಾಗುತ್ತದೆ' ಎಂದರು.

ತನ್ನ ವ್ಯಾಪ್ತಿ ಮೀರಿದ ತಪ್ಪಿನ ಅರಿವಾಗಿ 'ಕ್ಷಮಿಸಿ' ಎಂದ.

'ಇಲ್ಲಾ ಬಿಡಿ ಸ್ವಾಮಿ, ಎಲ್ಲರಿಗೂ ಇದು ಒಂದು ತರಹ ಜೋಕ್ ಅನ್ಸುತ್ತೆ. ಆದ್ರೆ ಅವನು ರಜೆ ಇದ್ರೆ ಮನೆಗೆ ಬರಲ್ಲ. ದೊರೆಸಾನಿಗಳ ಜೊತೆ ಟೂರ್‌ಗೆ ಹೋಗಿ ಬಿಡ್ತಾನೆ. ಅವ್ರೂ ಎಲ್ಲಾ ಮಾನ ಮರ್ಯಾದೆ ಬಿಟ್ಟು ನಿಂತವ್ರೆ. ದುಡ್ಡಿನಾಸೆಗೆ ಇವನ ಜೊತೆ ಸುತ್ತುತ್ತವೆ. ಹಿಡಿದು ಗಲಾಟೆ ಮಾಡಿದ್ದೀವಿ. ನಮ್ಗೆ ಗೊತ್ತಿಲ್ಲದಂತೆ ಇನ್ನು ಎಷ್ಟು ಜನರು ಇದ್ದಾರೋ ಗೊತ್ತಿಲ್ಲ.'



ಮಾತು ಮತ್ತು ಗರ್ಲ್ ಫ್ರೆಂಡ್ಸ್‌ಗಳ ಸಂಖ್ಯೆ ಲಂಕೆಯ ಹನುಮಂತನ ಬಾಲದಂತೆ ಬೆಳೆಯುವುದನ್ನು ನಿಲ್ಲಿಸಲು 'ಈಗ ನನ್ನಿಂದ ನಿಮ್ಗೆ ಏನಾಗಬೇಕು ಹೇಳಿ' ಎಂದ.

'ಆ ನನ್ಮಗನ ನಿಮ್ಮ ಆಫೀಸಿನಲ್ಲಿ ದುಡ್ಡು ಬರ್ದೆ ಇರೋ ಜಾಗಕ್ಕೆ ಹಾಕಿ. ಬೆಳಿಗ್ಗೆಯಿಂದ ಸಂಜೆತನಕ ಆಫೀಸ್ನಲ್ಲೇ ಕೂರಬೇಕು. ಎಲ್ಲೂ ಯಾರ ಜೊತೇನು ಓಡಾಡಬಾರದು' ಎಂದು ಕೇಳಿದ್ದು, ತಾಯಿ ಹೃದಯ ಅಂಗಲಾಚಿದಂತೆನಿಸಿತು.

'ಆಯ್ತು ಮಾಡ್ತೀನಿ. ನಿಮ್ಮ ಮೊಮ್ಮಗಳಿಗೆ ಚೆನ್ನಾಗಿ ಓದಲಿಕ್ಕೆ ಹೇಳಿ' ಎಂದು ಮಾತು ಮುಗಿಸುವ ಮೊದಲೇ, 'ಒಂದ್ನಿಮಿಷ ಅವಳ ಜೊತೆ ಮಾತನಾಡಿ ಸ್ವಾಮಿ' ಎಂದು ಮೊಮ್ಮಗಳಿಗೆ ತಕ್ಷಣವೇ ಫೋನ್ ಕೊಟ್ಟರು.

'ನಮಸ್ಕಾರ ಸಾರ್' ಎಂದು ಕೋಮಲ ಧ್ವನಿಯ ಹೆಣ್ಣುಮಗುವಿಗೆ 'ಚೆನ್ನಾಗಿ ಓದಿ ಮುಂದೆ ಒಳ್ಳೆಯ ಪ್ರಜೆಯಾಗಬೇಕು' ಎಂದು ಹಾರೈಸಿದ.

'ನಾನು ನಿಮ್ಮ ತರಹ ಐಎಎಸ್ ಪಾಸ್ಮಾಡಿ ಆಫೀಸರ್ ಆಗ್ತೀನಿ' ಎಂದ ಹುಡುಗಿಯ ಆತ್ಮವಿಶ್ವಾಸ ಬೆಂಕಿಯಲ್ಲಿ ಅರಳುವ ಹೂವಿನಂತೆ ಕಾಣಿಸಿತು. 'ಫೋನ್ ನಿಮ್ಮಜ್ಜಿಗೆ ಕೊಡು' ಎಂದು ಮಹಿಳೆಯ ಧ್ವನಿಗೆ ಕಾದು, ಅತ್ತ ಕಡೆಯಿಂದ 'ಹೇಳಿ ಸ್ವಾಮಿ' ಎಂದಾಗ, 'ನೋಡಿ ಅಕ್ಕ, ಇಂತಹ ವಿಷಯಗಳನ್ನು ಮಕ್ಕಳೆದುರು ಚರ್ಚಿಸುವುದು ಮುಗ್ಧ ಮನಸಿನ ಮೇಲೆ ಕೆಟ್ಟ ಪ್ರಭಾವ ಬೀರುತ್ತೆ' ಎಂದ.

'ಆ ಹುಡ್ಗಿಗೆ ಎಲ್ಲಾ ಗೊತ್ತು. ಮನೇಲಿ ದಿನಾ ಜಗಳ ಇದ್ದಾಗ ವಯಸ್ಸಿಗೆ ಬಂದ ಹುಡ್ಗಿಗೆ ಎಲ್ಲಾ ಗೊತ್ತಾಗುತ್ತೆ. ಅವನ ಒಬ್ಳು ಗರ್ಲ್ ಫ್ರೆಂಡ್ ಇವಳಿಗೆ ನೀನು ನನ್ನ ಹೊಟ್ಟೇಲಿ ಹುಟ್ಟಬೇಕಿತ್ತು. ಆಗ ನಾವು ಮೂವರು ಯಾವಾಗ್ಲು ಜೊತೆ ಇರಬಹುದಿತ್ತು ಅಂದಿದ್ಲು. ನನ್ನ ಮಗಳ ಕಷ್ಟ ನೋಡಿ ಮೊಮ್ಮಗಳು ನಿಮ್ಮ ತರಹ ಆಫೀಸರ್ ಆಗಬೇಕು ಅಂತಾ ಓದ್ತಿದ್ದಾಳೆ. ಈಗ ಸದ್ಯಕ್ಕೆ ಆ ನನ್ಮಗನ ದುಡ್ಡು ಬರ್ದೆ ಇರೊ ಜಾಗಕ್ಕೆ ಹಾಕಿ ಪುಣ್ಯ ಕಟ್ಟಿಕೊಳ್ಳಿ ಸ್ವಾಮಿ' ಎಂದು ವಿಷಾದದಲ್ಲೂ ಗುರಿ ಸಾಧನೆಗೆ ಮನವಿ ಸಲ್ಲಿಸುವುದನ್ನು ಮರೆಯಲಿಲ್ಲ.

'ಆಯ್ತು, ಇಂದೇ ಮಾಡ್ತಿನಿ' ಎಂದು ಭರವಸೆ ನೀಡಿ ಫೋನ್ ಸಂಪರ್ಕ ಮುಗಿಸಿದ.

ತನ್ನ ಕಚೇರಿಯ ಸಮಚಿತ್ತದ ಸಿಬ್ಬಂದಿ ಶಿವಪ್ಪನನ್ನು ಕರೆದು ಚಿರಂಜೀವಿ ಬಗ್ಗೆ ವಿಚಾರಿಸಿದ. ಅತ ತುಂಬಾ ರಸಿಕ ಮತ್ತು ಮಹಿಳೆ ದೂರಿದಂತೆ ನಡೆತೆಯವನೆಂದು ಖಾತ್ರಿಯಾದ ಮೇಲೆ, ಮಹಿಳೆಗೆ ನೀಡಿದ ಭರವಸೆಯಂತೆ ಕೇಂದ್ರ ಕಚೇರಿ ಟಪಾಲು ಶಾಖೆಗೆ ಅರ್ಜಿಗೆ ವರ್ಗಾಯಿಸಿದ.

ಮಹಿಳೆಯ ಕುಟುಂಬದ ಕಾಳಜಿ, ರಸಿಕ ಚಿರಂಜೀವಿಯ ಚಾಲಾಕಿತನ, ಅತನ ಹೆಂಡತಿಯ ಮಾನಸಿಕ ಸಂದಿಗ್ಧತೆ, ಸಣ್ಣ ವಯಸ್ಸಿನ ಮಗಳ ಭವಿಷ್ಯದ ಯೋಚನೆ ತಲೆಕೆಡಿಸಿತು. ಒಂದು ವಿಚಿತ್ರ ಅನುಭವದಲ್ಲಿ ಮಿಂದೆದ್ದ. ಗಡಿಯಾರದತ್ತ ಕಣ್ಣಾಡಿಸಿದಾಗ ಗಂಟೆ ಏಳಾಗಿದ್ದು ಮನೆಗೆ ಹೊರಡಲು ಕಾರಿಗೆ ಹತ್ತಿ ಕೂತ. ಮಂತ್ರಿಗಳ ಆಪ್ತ ಕಾರ್ಯದರ್ಶಿಯಿಂದ ಫೋನ್ ಕರೆ, ಸ್ವೀಕರಿಸಿ 'ಹಲೋ' ಎಂದ.

'ಸಾಹೇಬ್ರು ಹೇಳಿದ್ರು, ಚಿರಂಜೀವಿನ ಈಗ ಇರುವ ಜಾಗದಲ್ಲೇ ಮುಂದುವರೆಸಬೇಕು' – ಮದ್ಯೆ ಮೌನ.

ಫೋನ್ ಕಟ್ಟಾಯಿತು. ●